ಅ) ಬೀದರ್ ತಾಲ್ಲೂಕಿನ ಚಿಮಕೊಡ ಗ್ರಾಮದಲ್ಲಿ ಕೆರೆ ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಕೆರೆ ಒಡೆದಿರುವುದರಿಂದ 50 ಎಕರೆ ಹೊಲ ಮುಳುಗಿ ಹೋಗಿದ್ದು 10 ಬಾವಿ ಮುಚ್ಚಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಇದುವರೆಗೂ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ಮತ್ತು ಯಾವ ರೂಪದಲ್ಲಿ ನೀಡಲಾಗಿದೆ?

ಉ) ಪರಿಹಾರ ನೀಡದಿದ್ದಲ್ಲಿ ಕಾರಣಗಳೇನು? ಮತ್ತು ಎಂದಿನಿಂದ ಪರಿಹಾರ ನೀಡಲಾಗುವುದು

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಕೆರೆಯ ದುರಸ್ತಿಗಾಗಿ ರೂ. 79.50 ಲಕ್ಷಗಳ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು ಪರಿಶೀಲಿಸಿ ಹಣದ ಲಭ್ಯತೆಯನ್ವಯ ದುರಸ್ತಿ ಕೆಲಸ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಸುಮಾರು 112.00 ಎಕರೆ ಸಾಗುವಳಿ ಜಮೀನು ಹಾನಿಗೊಳಗಾಗಿದೆ. ತೆರೆದ ಬಾವಿಗಳು ಹಾನಿಯಾಗಿರುವುದಿಲ್ಲ.

ಈ) 69 ರೈತರಿಗೆ ಒಟ್ಟು 23,000-00 ಗಳನ್ನು ಕಂದಾಯ ಅಧಿಕಾರಿಗಳಿಂದ ಪರಿಹಾರ ಧನವನ್ನು ನೀಡಲಾಗಿದೆ.

ಉ) ಉದ್ಭವಿಸುವುದಿಲ್ಲ.

ಬೆಂಗಳೂರಿನ ಕೆಂಗಲ್ ಹನುಮಂತಯ್ಯ ರಸ್ತೆಯ ಮೇಲು ಸೇತುವೆ ಕಾಮಗಾರಿ

5100 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆಂಗಲ್ ಹನುಮಂತಯ್ಯ ರಸ್ತೆಯಿಂದ ರಿಚ್ಮಂಡ್ ವೃತ್ತದವರೆಗೆ ಮೇಲು ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಇದರ ಅಂದಾಜು ವೆಚ್ಚವೆಷ್ಟು?

ಇ) ಈ ಕಾಮಗಾರಿಯನ್ನು ಯಾರಿಗೆ ಗುತ್ತಿಗೆ ನೀಡಲಾಗಿದೆ?

ಈ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು?

ಉ) ಈ ಕಾಮಗಾರಿಗಾಗಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?

ಊ) ಈ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು?

ಋ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ದಿನಾಂಕ 27.4.1993ರಂದು ಗುತ್ತಿಗೆದಾರರಿಗೆ ಕೆಲಸ ಆದೇಶವನ್ನು ನೀಡಲಾಗಿದೆ.

ಆ) ರೂ. 40.93 ಕೋಟಿಗಳು.

ಇ) ಮೆ. ಈಸ್ಟ್ ಕೋಸ್ಟ್ ಕನ್‌ಸ್ಟ್ರಕ್ಷನ್ ಇಂಡಿಯಾ ಲಿಮಿಟೆಡ್ - ಚೆನ್ನೈ

ಈ) ಕರಾರಿನಂತೆ ದಿನಾಂಕ 26.8.2000ದಂದು ಪೂರ್ಣಗೊಳ್ಳಬೇಕಾಗಿತ್ತು.

ಉ) ರೂ. 12.36 ಕೋಟಿಗಳು.

ಊ) 1. ಗುತ್ತಿಗೆದಾರರಿಗೆ ಕಾಮಗಾರಿ ಪ್ರದೇಶವನ್ನು ವರ್ಗಾಯಿಸುವುದು.

2. ರಸ್ತೆಯಲ್ಲಿ ಹಾಲೆ ಇರುವ ವಿದ್ಯುತ್ ಮತ್ತು ಟೆಲಿಫೋನ್, ಕೇಬಲ್ ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳನ್ನು ಸ್ಥಳಾಂತರಿಸುವುದು.

3. ವಾಹನ ಸಂಚಾರವನ್ನು ಇತರೆ ರಸ್ತೆಗಳಿಗೆ ವರ್ಗಾಯಿಸುವಲ್ಲಿ ವಿಳಂಬವಾಗಿರುವುದರಿಂದ ಈ ಮೇಲು ಸೇತುವೆ ಯೋಜನೆ ಪೂರ್ಣಗೊಳಿಸುವಲ್ಲಿ ವಿಳಂಬವಾಗುತ್ತಿದೆ.

ಋ) ದಿನಾಂಕ31.12.2000

ರಾಜ್ಯ ಕಾರಾಗೃಹಗಳಿಂದ ಖೈದಿಗಳು ಪರಾರಿಯಾಗಿರುವ ಪ್ರಕರಣಗಳು

5103 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಕಾರಾಗೃಹಗಳ ಸಂಖ್ಯೆ ಎಷ್ಟು?

ಆ) ಈ ಕಾರಾಗೃಹಗಳಲ್ಲಿರುವ ಒಟ್ಟು ಖೈದಿಗಳ ಸಂಖ್ಯೆ ಎಷ್ಟು?

ಇ) ಈ ಕಾರಾಗೃಹಗಳಿಂದ ಇಲ್ಲಿಯವರೆಗೆ ಖೈದಿಗಳು ಪರಾರಿಯಾಗಿರುವ ಪ್ರಕರಣಗಳೆಷ್ಟು? (ಕಾರಾಗೃಹವಾರು ವಿವರ ನೀಡುವುದು)

ಈ) ಖೈದಿಗಳು ಪರಾರಿಯಾಗಲು ಕಾರಣಗಳೇನು?

ಉ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 90 ಕಾರಾಗೃಹಗಳಿರುತ್ತವೆ.

ಆ) ದಿನಾಂಕ 31.10.2000ರಲ್ಲಿದ್ದಂತೆ ವಿವಿಧ ಕಾರಾಗೃಹಗಳಲ್ಲಿ 9130 ಪುರುಷ ಖೈದಿಗಳು ಹಾಗೂ 273 ಮಹಿಳಾ ಖೈದಿಗಳು ಒಟ್ಟು 9403 ಖೈದಿಗಳು ಇರುತ್ತಾರೆ.